Com.O.S. 03/2023
DW-2

ಸಾಕ್ಷಿಯನ್ನು ಈ ದಿನ ದಿನಾಂಕ 16.07.2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ ಎಸ್ ಆರ್ ಪಿ ವಕೀಲರಿಂದಃ ವಾದಿಯ ಪರವಾಗಿಃ**

ವಾದಿಯರು ಸಲ್ಲಿಸಿರುವ ಅರ್ಜಿಯ ಮೇರೆಗೆ ಈ ಕೇಸನಲ್ಲಿ ಮಾರ್ಚ 2012 ರಲ್ಲಿ ಆದ ಟರ್ಮಿನೇಶನ ಡಾಕುಮೆಂಟ ಎ/ಸಿ 5054-04-800-3-03-436 ದಾಖಲೆಯನ್ನು ನಾವು ಹಾಜರು ಪಡಿಸುವಂತೆ ಈ

ನ್ಯಾಯಾಲಯವು ಆದೇಶಿಸಿರುತ್ತದೆ ಮತ್ತು ಸದರಿ ಆದೇಶದಂತೆ ನಾವು ದಾಖಲೆಯನ್ನು ನಾವು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಸತ್ಯವನ್ನು ಮರೆಮಾಚುವ ಉದ್ದೇಶದಿಂದ ನಾವು ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಆದೇಶ ನಂಬರ ಆರ್ ಡಿ ಪಿಃ 43/1◌ಃ ಆರ್ ಆರ್ ಸಿಃ 2010, ಬೆಂಗಳೂರು ದಿನಾಂಕ 20.10.2010 ರ ಟೆಸ್ಟ ಫಲಿತಾಂಶ ಮತ್ತು ಪ್ರಮಾಣ ಪತ್ರ (Test results and certificate) ಮತ್ತು ಮೂರನೇ ಪ್ರತಿವಾದಿಯು ನಾಲ್ಕನೇ ಪ್ರತಿವಾದಿಗೆ ಮತ್ತು ನಾಲ್ಕನೇ ಪ್ರತಿವಾದಿಯು ಸಂಬಂಧಪಟ್ಟ ಸೆಕ್ಷನ್ ಆಫೀಸರ್ ಗಳಿಗೆ ನೀಡಿರುವ ಜ್ಞಾಪನ ಪತ್ರಗಳನ್ನು ಹಾಜರು ಪಡಿಸುವಂತೆ ಈ ನ್ಯಾಯಾಲಯವು ವಾದಿ ಸಲ್ಲಿಸಿರುವ ಅರ್ಜಿಯ ಮೇರೆಗೆ ಆದೇಶ ಮಾಡಿರುತ್ತದೆ, ಆದರೆ ಸದರಿ ದಾಖಲೆಗಳನ್ನು ನಾವು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಸತ್ಯ ಮರೆಮಾಚುವ ಉದ್ದೇಶದಿಂದ ಸದರಿ ದಾಖಲೆಗಳನ್ನು ನಾವು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ನಾವು ಮೆಜೆರಮೆಂಟ ಬುಕ್, ಮೆಟಿರಿಯಲ್ ಮತ್ತು ಸೈಟ್ ಅಕೌಂಟ, ಟೂಲ್ಸ ಮತ್ತು ಪ್ಲಾಂಟ್ಸ್ ಅಕೌಂಟ ಹಾಗೂ ಪ್ರೊಗ್ರೆಸ್ ರಿಪೋರ್ಟ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಕಾಮಗಾರಿ ಕೆಲಸವನ್ನು ಸಮರ್ಪಕವಾಗಿ ಮಾಡದ ಕಾರಣ ಸದರಿ ದಾಖಲೆಗಳನ್ನು ನಾವು ನ್ಯಾಯಾಲಯದಲ್ಲಿ ಹಾಜರು ಮಾಡಿಲ್ಲ. ಈ ಮೇಲೆ ಹೇಳಿರುವ ದಾಖಲೆಗಳನ್ನು ನಾವು ಕಚೇರಿಯಲ್ಲಿ ಇಟ್ಟುಕೊಂಡಿಲ್ಲ ಮತ್ತು ಈ ಕಾರಣಕ್ಕೆ ಸದರಿ ದಾಖಲೆಗಳನ್ನು ನಾವು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು ರನ್ನಿಂಗ ಬಿಲ್ಲುಗಳನ್ನು ಹಾಜರು ಪಡಿಸಿಲ್ಲ

ಎಂದರೆ ಸರಿಯಲ್ಲ. ಮುಂದುವರೆದ ರನ್ನಿಂಗ್ ಬಿಲ್ಲುಗಳನ್ನು ನಾವು ಈ ದಾವೆಯ ಕಾಮಗಾರಿಗೆ ಸಂಬಂಧಪಟ್ಟಂತೆ ಮಾಡಿಲ್ಲ ಎಂದರೆ ಸರಿ.

ಲಿಕ್ವಿಡೇಟೆಡ್ ಪರಿಹಾರದ ಹಣ ಒಟ್ಟು ಕಾಮಗಾರಿಯ ಹಣದ ಮೊತ್ತದ ಶೇಕಡಾ 5 ನ್ನು ಮೀರುವಂತಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು ಕಾಮಗಾರಿಯ ಕೆಲಸದ ಶೇಕಡಾ 39 ರಷ್ಟು ಮೌಲ್ಯ ಲಿಕ್ವಿಡೇಟೆಡ್ ಪರಿಹಾರದ ಹಣ ಕೇಳಿದ್ದು ಎಂದರೆ ಸರಿಯಲ್ಲ. ವಾದಿಯು ನಮಗೆ ನೀಡಿರುವ ನೋಟಿಸ್ಸಿಗೆ ನಾವು ಪ್ಯಾರಾ ವೈಸ್ ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ಮೂರನೇ ಪಕ್ಷಗಾರ ಇಂಜನಿಯರಿಂಗ್ ಕಾಲೇಜಗಳಿಂದ ನಾವು ಕಾಮಗಾರಿ ಕೆಲಸದ ಪರೀಕ್ಷೆಯನ್ನು ಮಾಡಿಸಿದ್ದೆವು ಎಂದರೆ ಸರಿ.

ಈಗ ತೋರಿಸಿದ ನಿಪಿ–16 ದಾಖಲೆಯು ಚಿಕ್ಕೋಡಿಯ ಕೆ ಎಲ್ ಇ ಇಂಜಿನಿಯರಿಂಗ್ ಕಾಲೇಜ್‌ನವರು ನೀಡಿರುವ ಟೆಸ್ಟ ರೀಪೋರ್ಟ ಸಿಬಿಆರ್ ಪರೀಕ್ಷಾ ವರದಿ ಮತ್ತು ಸದರಿ ವರದಿಯ ಪ್ರಕಾರ ಸಿಬಿಆರ್ ವ್ಯಾಲ್ಯು 3.1 ಮತ್ತು 2.9 ಎಂದರೆ ಸರಿ. ಸದರಿ ವರದಿಯ ಪ್ರಕಾರ ಸ್ಥಳದಲ್ಲಿ ಕಪ್ಪು ಮಣ್ಣು (Black Cotton Soil) ಕಂಡುಬಂದಿರುತ್ತದೆ ಎಂದರೆ ಸರಿ. ಕಾಮಗಾರಿ ಸ್ಥಳದಲ್ಲಿ ಈ ಮೇಲೆ ಹೇಳಿದ ರೀತಿಯ ಕಪ್ಪು ಮಣ್ಣು ಇದೆ ಎಂದು ಎಸ್ಟಿಮೆಟನಲ್ಲಿ ನಮೂದು ಮಾಡದಿದ್ದರೇ ಅಂತಹ ಸ್ಥಳದಲ್ಲಿ ರಸ್ತೆ ಕಾಮಗಾರಿಯ ಕೆಲಸ ಮಾಡಲು ಕಷ್ಟವಾಗುತ್ತದೆ ಎಂದರೆ ಸರಿ.

ಈಗ ತೋರಿಸಿದ ನಿಪಿ–17 ದಾಖಲೆಯು ಚಿಕ್ಕೋಡಿಯ ಚಿದಾನಂದ ಬಿ. ಕೋರೆ ಪಾಲಿಟೆಕ್ನಿಕನವರು ನೀಡಿರುವ Test report on Murum

ಎಂದರೆ ಸರಿ. ಸದರಿ ವರದಿಯ ಪ್ರಕಾರ Murum ತೃಪ್ತಿದಾಯಕವಾಗಿರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಈಗ ತೋರಿಸಿದ ನಿಪಿ–18 ದಾಖಲೆಯು ಚಿಕ್ಕೋಡಿಯ ಚಿದಾನಂದ ಬಿ. ಕೋರೆ ಪಾಲಿಟೆಕ್ನಿಕನವರು ನೀಡಿರುವ Grading of coarse aggregates for WBM ಎಂದರೆ ಸರಿ. ಸದರಿ ವರದಿಯ ಪ್ರಕಾರ Grading of coarse aggregates for WBM ತೃಪ್ತಿದಾಯಕವಾಗಿರುತ್ತದೆ ಎಂದರೆ ಸರಿ. ಈಗ ತೋರಿಸಿದ ನಿಪಿ–19 ದಾಖಲೆಯು ಚಿಕ್ಕೋಡಿಯ ಚಿದಾನಂದ ಬಿ. ಕೋರೆ ಪಾಲಿಟೆಕ್ನಿಕನವರು ನೀಡಿರುವ Concrete cube test report ಎಂದರೆ ಸರಿ. ಸದರಿ ವರದಿಯ ಪ್ರಕಾರ Concrete cube ತೃಪ್ತಿದಾಯಕವಾಗಿರುತ್ತದೆ ಎಂದರೆ ಸರಿ. ನಿಡಿ–30 ಎಸ್ಟಿಮೆಟನ ಟೆಕ್ನಿಕಲ್ ನೋಟ್ ಪ್ರಕಾರ ಪ್ರತಿ 15 ಮೀಟರಗೆ ಸಹಾಯಕ ಕಾರ್ಯಪಾಲಕ ಇಂಜಿಯರರವರು ಕಾಮಗಾರಿಯನ್ನು ಪರಿಶೀಲನೆ ಮಾಡಬೇಕು ಎಂದರೆ ಸರಿ.

ನಿಪಿ–134 ಮಾಹಿತಿಯಲ್ಲಿರುವ Volume report–Murum ಪ್ರಕಾರ ಸಹಾಯಕ ಕಾರ್ಯಪಾಲಕ ಇಂಜಿನಿಯರವರು ಪ್ರತಿ 30 ಮೀಟದ ಉದ್ದದ ಕಾಮಗಾರಿಯನ್ನು ಪರೀಶೀಲನೆ ಮಾಡಿದ್ದು ಎಂದರೆ ಸರಿ. ಈ ದಾವೆಯಲ್ಲಿ ಸತ್ಯ ಮರೆಮಾಚುವ ಉದ್ದೇಶದಿಂದ ರಸ್ತೆ ಕಾಮಗಾರಿಯನ್ನು ಪ್ರತಿ 30 ಮೀಟರಗೆ ಪರೀಶೀಲನೆ ಮಾಡಿದ್ದು ಎಂದರೆ ಸರಿಯಲ್ಲ. ಈಗ ತೋರಿಸಿದ ನಿಪಿ–46 ರಿಂದ ನಿಪಿ–48 ಪೋಟೊಗಳನ್ನು ಕಾಮಗಾರಿ ಕೆಲಸದ ಸ್ಥಳಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸದರಿ ಪೋಟೊಗಳ ಪ್ರಕಾರ ಸ್ಥಳದಲ್ಲಿ ರಸ್ತೆಯನ್ನು ಎತ್ತರದ ಗುಡ್ಡವನ್ನು ಅಗೆದು ರಸ್ತೆ ಮಾಡಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ.

ಈಗ ತೋರಿಸಿದ ನಿಪಿ–68 ದಾಖಲೆಯು ವಾದಿಯು ನೀಡಿರುವ ಎರಡನೇ ಆರ್ ಎ ಬಿಲ್ ಎಂದರೆ ಸರಿ. ಸದರಿ ಬಿಲ್ಲಿನ ಪ್ರಕಾರ ವಾದಿಗೆ ಪಾವತಿಬೇಕಾಗಿದ್ದ ಹಣ ರೂ.64,73,277/– ಎಂದರೆ ಸರಿ. ಸದರಿ ಬಿಲ್ಲಿನಲ್ಲಿ ಒಂದನೇ ಆರ್ ಎ ಬಿಲ್ಲಿನ ಹಣ ರೂ.13,41,343/– ಪಾವತಿ ಮಾಡಲಾಗಿದೆ ಎಂದು ಹೇಳಿದೆ ಎಂದರೆ ಸರಿ. ಈ ಮೇಲೆ ಹೇಳಿರುವ ಎರಡನೇ ಬಿಲ್ಲಿನ ಹಣ ರೂ.64,73,277/– ನಾವು ವಾದಿಗೆ ಈ ತನಕ ಪಾವತಿ ಮಾಡಿಲ್ಲ ಎಂದರೆ ಸರಿ. ಸದರಿ ನಿಪಿ–68 ಬಿಲ್ಲು ಸರಿ ಇಲ್ಲವೆಂದು ನಾವು ನಮ್ಮ ಮೇಲಾಧಿಕಾರಿಗಳ ಮುಂದೆ ಅದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಬಿಲ್ಲಿನ ಬಗ್ಗೆ ನಾವು ನಮ್ಮ ಮೇಲಾಧಿಕಾರಿಗಳಲ್ಲಿ ವಿಚಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ–68 ಬಿಲ್ಲಿನಲ್ಲಿ ಹೇಳಿರುವ ಹೆಚ್ಚುವರಿ ಐಟೆಮ ಬಗ್ಗೆ ನಮ್ಮ ಮೇಲಾಧಿಕಾರಿಗಳಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಸದರಿ ಬಿಲ್ಲನ್ನು ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬಿಲ್ಲನ್ನು ನಾವು ಒಪ್ಪಿಕೊಂಡಿದ್ದರೂ ಸಹ ಉದ್ದೇಶಪೂರ್ವಕವಾಗಿ ಸದರಿ ಬಿಲ್ಲಿನ ಹಣವನ್ನು ನಾವು ವಾದಿಗೆ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ.

ವಾದಿಗೆ ನೀಡಿರುವ ಕಾಮಗಾರಿಯ ಮುಂದುವರೆದ ಕೆಲಸವನ್ನು ನಾವು ಬೇರೆ ಗುತ್ತಿಗೆದಾರರಿಗೆ ನೀಡಿರುತ್ತೇವೆ ಎಂದರೆ ಸರಿ. ಆ ರೀತಿ ಬೇರೆ ಗುತ್ತಿಗೆದಾರರಿಗೆ ಕಾಮಗಾರಿ ಕೆಲಸವನ್ನು ನೀಡುವ ಸಂದರ್ಭದಲ್ಲಿ ಆತನಕ ವಾದಿಯು ಮಾಡಿರುವ ಕಾಮಗಾರಿಯ ಕೆಲಸದ ಅಂತಿಮ ಅಳತೆ ಮಾಡಬೇಕು ಎಂದರೆ ಸರಿ. ಮುಂದುವರೆದ ಕಾಮಗಾರಿ ಕೆಲಸವನ್ನು ಬೇರೆ ಗುತ್ತಿಗೆದಾರರಿಗೆ ನೀಡುವಾಗ ವಾದಿಯು ಮಾಡಿರುವ ಕಾಮಗಾರಿ ಕೆಲಸದ ಪ್ರಮಾಣವನ್ನು ನಾವು ಅಳತೆ ಮಾಡಿರುತ್ತೇವೆ. ಆ ರೀತಿ ನಾವು ಕಾಮಗಾರಿ ಕೆಲಸದ ಪ್ರಮಾಣವನ್ನು ಅಳತೆ ಮಾಡಿರುತ್ತೇವೆ ಎಂದು ತೋರಿಸುವ ಬಗ್ಗೆ ಯಾವುದೇ

ದಾಖಲೆಯನ್ನು ಈ ಕೇಸನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈ ಕೇಸನಲ್ಲಿ ನಮ್ಮನ್ನು ರಕ್ಷಿಸಿಕೊಳ್ಳುವ ಉದ್ದೇಶದಿಂದ ಮತ್ತು ವಾದಿಯು ಮಾಡಿರುವ ಕಾಮಗಾರಿ ಕೆಲಸದ ಹಣವನ್ನು ಪಾವತಿ ಮಾಡದೇ ಇರುವ ಸಲುವಾಗಿ ಆ ರೀತಿಯ ಅಳತೆಯ ದಾಖಲೆಯನ್ನು ನಾವು ಈ ಕೇಸನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನಿಡಿ–14 SQM Inspection report ಪ್ರಕಾರ ಸದರಿ ವರದಿಯ ಜೊತೆಯಲ್ಲಿ ಹಾಜರು ಪಡಿಸಿರುವ ಪೋಟೊಗಳಲ್ಲಿ ಅದಾಗಲೇ ರಸ್ತೆಯ ಡಾಂಬರೀಕರಣದ ಕೆಲಸ ಪ್ರಾರಂಭವಾಗಿದ್ದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಕಾಮಗಾರಿ ಕೆಲಸನ ಎಸ್ಟಿಮೇಟಿನ ಪ್ರಕಾರ ನಮ್ಮ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಆಗಾಗ ಕೆಲಸದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನಾ ವರದಿ ನೀಡಬೇಕು ಎಂದರೆ ಸರಿ. ಆ ರೀತಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನಾ ವರದಿ ನೀಡಿರುತ್ತಾರೆಂದು ಎಸ್ಟಿಮೇಟ್ ದಾಖಲೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳೆಲ್ಲಾ ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ವಾದಿಯು ಕೇಳಿರುವ ಬಿಲ್ಲಿನ ಹಣವನ್ನು ಪಾವತಿ ಮಾಡಬಾರದು ಎನ್ನುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪ್ರತಿವಾದಿಯು ನೀಡಬೇಕು ಎನ್ನುವುದನ್ನು ತಪ್ಪಿ ಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬಿಲ್ಲಿನ ಹಣವನ್ನು ವಾದಿಗೆ ಪಾವತಿ ಮಾಡದ ಕಾರಣ ಅವರಿಗೆ ಕಾಮಗಾರಿ ಕೆಲಸವನ್ನು ಮುಂದುವರೆಸಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯ ತಪ್ಪಿ ನಿಂದಾಗಿ ವಾದಿಯು ಬಿಲ್ಲಿನ ಹಣವನ್ನು ಪಡೆದಿಲ್ಲ ಮತ್ತು ಈ ಕಾರಣದಿಂದ ಆತನಿಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಕಚೇರಿಯ ಎಸ್ಟಿಮೇಟಿನ ತಪ್ಪಿನಿಂದಾಗಿ ವಾದಿಗೆ ಕಾಮಗಾರಿ ಕೆಲಸವನ್ನು ಪೂರ್ತಿಗೊಳಿಸಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ವಾದಿಯ ವಿರುದ್ಧ ನಾವು ಸುಳ್ಳು ಪರಿಹಾರದ ಹಣವನ್ನು ಕೇಳಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಹೆಚ್ಚುವರಿ ಕೆಲಸವನ್ನು ಮಾಡಿರುತ್ತಾನೆ ಮತ್ತು ಸದರಿ ಕೆಲಸದ ಬಿಲ್ಲಿನ ಹಣವನ್ನು ನಾವು ಪಾವತಿ ಮಾಡದ ಕಾರಣ ವಾದಿಗೆ ಕಾಮಗಾರಿ ಕೆಲಸವನ್ನು ಪೂರ್ತಿಗೊಳಿಸಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ನೀಡಲು ಪ್ರತಿವಾದಿಯರು ಬದ್ಧರಾಗಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.